ಈ ನಕಲು ಪ್ರತಿ 12 ಹಾಳೆಗಳನ್ನು ಹೊಂದಿದೆ
1 ನೇ ಹಾಳೆಯ ನಕಲು ಅರ್ಜಿ ಸಂಖ್ಯೆ 625

RNI No. KARBIL/2001/47147

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ರಾಜ್ಯ ಪತ್ರಿಕೆ

ಭಾಗ – III Part – III	ಬೆಂಗಳೂರು, ಮಂಗಳವಾರ, ಜನವರಿ ೧, ೨೦೧೯ (ಪುಷ್ಯ ೧೧, ಶಕ ವರ್ಷ ೧೯೪೦) Bengaluru, Tuesday, January 1, 2019 (Pushya 11, Shaka Varsha 1940)	ನಂ. ೧ No. 1

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಅಧಿಸೂಚನೆ

ಸಂಖ್ಯೆ: ನೋ.ಮು/ಸಿವಿಸಿ/485/2017-18, ಬೆಂಗಳೂರು, ದಿನಾಂಕ: 05-12-2018

ವಿಷಯ: ಬೆಂಗಳೂರು ನಗರ ಜಿಲ್ಲೆಯ ಗಾಂಧಿನಗರ ಜಿಲ್ಲಾ ನೋಂದಣಿ ಕಛೇರಿ ವ್ಯಾಪ್ತಿಯ ಸ್ಥಿರಾಸ್ತಿಗಳ ನೋಂದಣಿಗಾಗಿ, ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಯ ದರಪಟ್ಟಿಯ ಕುರಿತು.

ಉಲ್ಲೇಖ: 1) ಅಧಿಸೂಚನೆ ಸಂಖ್ಯೆ: ನೋ.ಮು/ಸಿವಿಸಿ/485/2017-18, ದಿನಾಂಕ: 29-08-2018

2) ಕೇಂದ್ರ ಮೌಲ್ಯ ಮಾಪನ ಸಮಿತಿ ಸಭೆಯ ನಡಾವಳಿ ಸಂಖ್ಯೆ: ನೋ.ಮು/ಸಿವಿಸಿ/485/2017-18, ದಿನಾಂಕ: 29-09-2018.

1. ಬೆಂಗಳೂರು ನಗರ ಜಿಲ್ಲೆಯ ಗಾಂಧಿನಗರ ಜಿಲ್ಲಾ ನೋಂದಣಿ ಕಛೇರಿಯ ವ್ಯಾಪ್ತಿಯ ಸ್ಥಿರಾಸ್ತಿಗಳ ಅಂದಾಜು ಸರಾಸರಿ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿ ದರಗಳನ್ನು ಪರಿಷ್ಕರಿಸಿ ಹೊರಡಿಸಿದ ಉಲ್ಲೇಖ(1)ರ ಅಧಿಸೂಚನೆಯನ್ನು ಸಾರ್ವಜನಿಕ ಆಕ್ಷೇಪಣೆ/ಸಲಹೆ/ಸೂಚನೆಗಳಿಗಾಗಿ ಕರ್ನಾಟಕ ರಾಜ್ಯ ಪತ್ರಿಕೆಯಲ್ಲಿ ಭಾಗ-III, ಸಂಖ್ಯೆ: 1291, ದಿನಾಂಕ: 29-08-2018 ರಲ್ಲಿ ಹೊರಡಿಸಿದ ದಿನಾಂಕ ದಿಂದ 15 ದಿನಗಳೊಳಗಾಗಿ ಆಕ್ಷೇಪಣೆ/ಸಲಹೆ/ಸೂಚನೆಗಳನ್ನು ಸಲ್ಲಿಸುವಂತೆ ಪ್ರಕಟಿಸಲಾಗಿತ್ತು.

NOTARY ★ GOVT. OF KARNATAKA ★

2. ಸದರಿ ರಾಜ್ಯ ಪತ್ರವನ್ನು ಸಾರ್ವಜನಿಕರಿಗೆ ಲಭ್ಯವಾಗಿರುವಂತೆ ಸೂಕ್ತ ಕ್ರಮ ಕೈಗೊಳ್ಳಲಾಗಿತ್ತು. ಅಲ್ಲದೆ ಉಲ್ಲೇಖ(2)ರ ದಿನಾಂಕ: 29-09-2018 ರಂದು ನಡೆದ ಕೇಂದ್ರ ಮೌಲ್ಯಮಾಪನ ಸಮಿತಿಯ ಸಭೆಯಲ್ಲಿ ಸಾರ್ವಜನಿಕರಿಂದ ಸ್ವೀಕೃತವಾದ ಆಕ್ಷೇಪಣೆ/ಸಲಹೆ/ಸೂಚನೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಅಂತಿಮಗೊಳಿಸಲಾಗಿದೆ.

3. ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಸೆಕ್ಷನ್ 45-ಬಿ ಮತ್ತು ಕರ್ನಾಟಕ ಮುದ್ರಾಂಕ (ಆಸ್ತಿಯ ಅಂದಾಜು ಸರಾಸರಿ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಯ ಪರಿಷ್ಕರಣೆ ಮತ್ತು ಪ್ರಕಟಣೆಗಾಗಿ ಕೇಂದ್ರ ಮೌಲ್ಯ ಮಾಪನ ಸಮಿತಿಯ ರಚನೆ) ಅಧಿನಿಯಮಗಳು 2003ರ ಅಧಿನಿಯಮ 7(3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕೇಂದ್ರ ಮೌಲ್ಯ ಮಾಪನ ಸಮಿತಿಯು ಸ್ಥಿರಾಸ್ತಿಗಳ ಅಂದಾಜು ಸರಾಸರಿ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿಯ ದರಗಳನ್ನು ಈ ಮೂಲಕ ಪರಿಷ್ಕರಿಸಿ ಪ್ರಕಟಿಸಲಾಗಿದೆ. ಸದರಿ ಮಾರ್ಗಸೂಚಿ ದರಗಳು ಅನುಬಂಧದಲ್ಲಿರುವ ಗಾಂಧಿನಗರ ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕೆಳಗೆ ಪಟ್ಟಿಮಾಡಿರುವ ಉಪನೋಂದಣಿ ಕಛೇರಿ ವ್ಯಾಪ್ತಿಗೆ ಒಳಪಡುವ ಸ್ಥಿರಾಸ್ತಿಗಳು ಮತ್ತು ಕಟ್ಟಡಗಳಿಗೆ ಅನ್ವಯಿಸುತ್ತದೆ. **ಈ ಅಧಿಸೂಚನೆಯು 2018-19 ನೇ ಸಾಲಿಗೆ "ದಿನಾಂಕ: 01-01-2019 ರಿಂದ" ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ.**

4. ಈ ಕೆಳಕಂಡ 9 ಉಪ ನೋಂದಣಿ ಕಛೇರಿಗಳ ವ್ಯಾಪ್ತಿಯಲ್ಲಿ ಬರುವ ಸ್ಥಿರಾಸ್ತಿಗಳ ಮಾರುಕಟ್ಟೆ ಮೌಲ್ಯ ಮಾರ್ಗಸೂಚಿ, ಕಟ್ಟಡಗಳಿಗೆ ಅನ್ವಯಿಸುವಂತೆ ದರಗಳು ಹಾಗೂ ರೆಡಿ ರೆಕ್ನರ್‌ಅನ್ನು ಕ್ರಮವಾಗಿ ಅನುಬಂಧ 1, 2 ಮತ್ತು ಅನುಬಂಧ 3 ರಲ್ಲಿ ಪ್ರಕಟಿಸಲಾಗಿದೆ.

ಕ್ರ.ಸಂ	ಉಪನೋಂದಣಿ ಕಛೇರಿಯ ಹೆಸರು	ಪುಟ ಸಂಖ್ಯೆ
1.	ಗಾಂಧಿನಗರ ಉಪನೋಂದಣಿ ಕಛೇರಿ	11-46
2.	ಮಲ್ಲೇಶ್ವರಂ ಉಪನೋಂದಣಿ ಕಛೇರಿ	47-78
3.	ಗಂಗಾನಗರ ಉಪನೋಂದಣಿ ಕಛೇರಿ	79-112
4.	ಹೆಬ್ಬಾಳ ಉಪನೋಂದಣಿ ಕಛೇರಿ	113-175
5.	ಕಾಚರಕನಹಳ್ಳಿ ಉಪನೋಂದಣಿ ಕಛೇರಿ	176-198
6.	ಬ್ಯಾಟರಾಯನಪುರ ಉಪನೋಂದಣಿ ಕಛೇರಿ	199-228
7.	ಯಲಹಂಕ ಉಪನೋಂದಣಿ ಕಛೇರಿ	229-251
8.	ಜಾಲ ಉಪನೋಂದಣಿ ಕಛೇರಿ	252-266
9.	ಹೆಸರಘಟ್ಟ ಉಪನೋಂದಣಿ ಕಛೇರಿ	267-275

ಅಧ್ಯಕ್ಷರು, ಕೇಂದ್ರ ಮೌಲ್ಯ ಮಾಪನ ಸಮಿತಿ, ಬೆಂಗಳೂರು ಇವರ ಆದೇಶದ ಮೇರೆಗೆ,

ಬಿ.ಎಸ್.ಶ್ರೀಧರ್
ಸದಸ್ಯ ಕಾರ್ಯದರ್ಶಿ,
ಕೇಂದ್ರ ಮೌಲ್ಯ ಮಾಪನ ಸಮಿತಿ, ಬೆಂಗಳೂರು.

ಅನುಬಂಧ-1

1. ಮೌಲ್ಯ ಮಾಪನಕ್ಕೆ ಸಂಬಂಧಿಸಿದಂತೆ ಅನ್ವಯಿಸುವ ವಿಶೇಷ ಸೂಚನೆಗಳು:

1. ಅ. ಕೆಳಕಂಡ ಕೃಷಿ ಜಮೀನು ಅಥವಾ ಭೂಪರಿವರ್ತನೆಯಾದ ಪೂರ್ಣ ವಿಸ್ತೀರ್ಣದ (ಸರ್ವೆ ನಂಬರಿನ ಸಂಪೂರ್ಣ ವಿಸ್ತೀರ್ಣದಂತೆ ಹಾಗೂ ಭಾಗಶಃ ಇಲ್ಲದಂತೆ) *ಅಭಿವೃದ್ಧಿಹೊಂದದ ಸ್ವತ್ತನ್ನು ಪರಭಾರೆ ಮಾಡಿದಾಗ ಕೆಳಕಂಡಂತೆ ದರಗಳನ್ನು ಅಳವಡಿಸುವುದು.

(i)	5 ಗುಂಟೆ ವಿಸ್ತೀರ್ಣದ ವರೆಗಿನ ಜಮೀನಿಗೆ (5 ಗುಂಟೆ ಸೇರಿದಂತೆ)	ಸಂಬಂಧಿಸಿದ ಆಯಾ ಪ್ರದೇಶದ ನಿವೇಶನ ದರ ಅಥವಾ ಆಯಾ ಕೃಷಿ ಜಮೀನಿನ ತರಹದ ದರ (ಪ್ರತಿ ಎಕರೆ ದರಗಳನ್ನು ಪ್ರತಿ ಚದರ ಮೀಟರ್‌ಗೆ ಪರಿವರ್ತಿಸಿದಾಗ ಬರುವ ದರ), ಯಾವುದು ಹೆಚ್ಚು ಅದನ್ನು ಅಳವಡಿಸತಕ್ಕದ್ದು.

ನಿವೇಶನ ದರ = ಯಾವ ಉದ್ದೇಶಕ್ಕೆ ಭೂಪರಿವರ್ತನೆ ಆಗಿರುತ್ತದೆಯೋ ಆ ಉದ್ದೇಶದ (ಅಂದರೆ ವಸತಿ, ಕೈಗಾರಿಕೆ ಮತ್ತು ವಾಣಿಜ್ಯಯೋಪಯೋಗಿ/ ವಸತಿಯೇತರ ಉದ್ದೇಶಗಳು) ಸ್ವತ್ತು/ಜಮೀನುಗಳಿಗೆ ಆಯಾ ಪ್ರದೇಶದ ನಿವೇಶನ ದರವನ್ನು (ವಸತಿಯೇತರ/ವಾಣಿಜ್ಯಯೋಪಯೋಗಿ/ ಸ್ವತ್ತಿನ ದರದೊಂದಿಗೆ) ಅಳವಡಿಸಿಕೊಳ್ಳತಕ್ಕದ್ದು.

ಸಿವಿಸಿ ನಿಯಮಗಳು 2003 ರ ನಿಯಮ 6(2)(a) ರನ್ವಯ ಈ ಕೆಳಕಂಡಂತೆ ದರ ನಿಗದಿಪಡಿಸಿದೆ.

ಪಟ್ಟಣ ಪಂಚಾಯ್ತಿ/ಪುರಸಭೆ/ನಗರಸಭೆ/ಮಹಾನಗರ ಪಾಲಿಕೆ ವ್ಯಾಪ್ತಿಯ "ಒಳಗೆ ಬರುವ ಸ್ಥಿರಾಸ್ತಿಗಳಿಗೆ" ಸಂಬಂಧಿಸಿದಂತೆ:

ಆ. ಕೆಳಕಂಡ ಭೂಪರಿವರ್ತನೆಯಾದ ಪೂರ್ಣ ವಿಸ್ತೀರ್ಣದ (ಸರ್ವೆ ನಂಬರಿನ ಸಂಪೂರ್ಣ ವಿಸ್ತೀರ್ಣದಂತೆ ಹಾಗೂ ಭಾಗಶಃ ಇಲ್ಲದಂತೆ) ಅಭಿವೃದ್ಧಿ ಹೊಂದದ ಸ್ವತ್ತನ್ನು ಪರಭಾರೆ ಮಾಡಿದಾಗ ಕೆಳಕಂಡಂತೆ ದರಗಳನ್ನು ಅಳವಡಿಸುವುದು.

(ii)	5 ಗುಂಟೆಯಿಂದ ಮೇಲ್ಪಟ್ಟು 7.5 ಗುಂಟೆಯವರೆಗೆ ವಿಸ್ತೀರ್ಣದ ಜಮೀನಿಗೆ (7.5 ಗುಂಟೆ ಸೇರಿದಂತೆ)	ಸಂಬಂಧಿಸಿದ ಆಯಾ ಪ್ರದೇಶದ ನಿವೇಶನ ದರದಲ್ಲಿ 70% ರಷ್ಟು ಅಥವಾ ಆಯಾ ಕೃಷಿ ಜಮೀನಿನ ತರಹದ ದರ (ಪ್ರತಿ ಎಕರೆ ದರಗಳನ್ನು ಪ್ರತಿ ಚದರ ಮೀಟರ್‌ಗೆ ಪರಿವರ್ತಿಸಿದಾಗ ಬರುವ ದರ), ಯಾವುದು ಹೆಚ್ಚು ಅದನ್ನು ಅಳವಡಿಸತಕ್ಕದ್ದು.
(iii)	7.5 ಗುಂಟೆಯಿಂದ ಮೇಲ್ಪಟ್ಟು 10 ಗುಂಟೆಯವರೆಗೆ ವಿಸ್ತೀರ್ಣದ ಜಮೀನಿಗೆ (10 ಗುಂಟೆ ಸೇರಿದಂತೆ)	ಸಂಬಂಧಿಸಿದ ಆಯಾ ಪ್ರದೇಶದ ನಿವೇಶನ ದರದಲ್ಲಿ 65% ರಷ್ಟು ಅಥವಾ ಆಯಾ ಕೃಷಿ ಜಮೀನಿನ ತರಹದ ದರ (ಪ್ರತಿ ಎಕರೆ ದರಗಳನ್ನು ಪ್ರತಿ ಚದರ ಮೀಟರ್‌ಗೆ ಪರಿವರ್ತಿಸಿದಾಗ ಬರುವ ದರ), ಯಾವುದು ಹೆಚ್ಚು ಅದನ್ನು ಅಳವಡಿಸತಕ್ಕದ್ದು.
(iv)	10 ಗುಂಟೆಯಿಂದ ಮೇಲ್ಪಟ್ಟು 20 ಗುಂಟೆಯವರೆಗೆ ವಿಸ್ತೀರ್ಣದ ಜಮೀನಿಗೆ (20 ಗುಂಟೆ ಸೇರಿದಂತೆ)	ಆಯಾ ಪ್ರದೇಶದ ನಿವೇಶನದ ದರವನ್ನು 60% ರಷ್ಟು ಅಥವಾ ಆಯಾ ಕೃಷಿ ಜಮೀನಿನ ತರಹದ ದರ (ಪ್ರತಿ ಎಕರೆ ದರಗಳನ್ನು ಪ್ರತಿ ಚದರ ಮೀಟರ್‌ಗೆ ಪರಿವರ್ತಿಸಿದಾಗ ಬರುವ ದರ), ಯಾವುದು ಹೆಚ್ಚು ಅದನ್ನು ಅಳವಡಿಸತಕ್ಕದ್ದು.
(v)	20 ಗುಂಟೆಯಿಂದ ಮೇಲ್ಪಟ್ಟು 40 ಗುಂಟೆಯವರೆಗೆ (1 ಎಕರೆ) ವಿಸ್ತೀರ್ಣದ ಜಮೀನಿಗೆ (40 ಗುಂಟೆ ಸೇರಿದಂತೆ)	ಆಯಾ ಪ್ರದೇಶದ ನಿವೇಶನದ ದರವನ್ನು 55% ರಷ್ಟು ಅಥವಾ ಆಯಾ ಕೃಷಿ ಜಮೀನಿನ ತರಹದ ದರ (ಪ್ರತಿ ಎಕರೆ ದರಗಳನ್ನು ಪ್ರತಿ ಚದರ ಮೀಟರ್‌ಗೆ ಪರಿವರ್ತಿಸಿದಾಗ ಬರುವ ದರ), ಯಾವುದು ಹೆಚ್ಚು ಅದನ್ನು ಅಳವಡಿಸತಕ್ಕದ್ದು.
(vi)	1 ಎಕರೆ ಮೇಲ್ಪಟ್ಟ ವಿಸ್ತೀರ್ಣದ ಜಮೀನಿಗೆ	ಆಯಾ ಪ್ರದೇಶದ ನಿವೇಶನದ ದರವನ್ನು 40% ರಷ್ಟು ಅಥವಾ ಆಯಾ ಕೃಷಿ ಜಮೀನಿನ ಈ ಕೆಳಗಿನ ತರಹದ ಕೈಗಾರಿಕೋಪಯೋಗಿ — 55 % (ಮೂಲ ಕೃಷಿ ಜಮೀನಿನ ದರಕ್ಕೆ ಹೆಚ್ಚಿನ ದರ) ವಾಸೋಪಯೋಗಿ — 65 % (ಮೂಲ ಕೃಷಿ ಜಮೀನಿನ ದರಕ್ಕೆ ಹೆಚ್ಚಿನ ದರ) ವಾಣಿಜ್ಯೋಪಯೋಗಿ/ ವಸತಿಯೇತರ — 80 % (ಮೂಲ ಕೃಷಿ ಜಮೀನಿನ ದರಕ್ಕೆ ಹೆಚ್ಚಿನ ದರ) ದರ ಯಾವುದು ಹೆಚ್ಚು ಅದನ್ನು ಅಳವಡಿಸತಕ್ಕದ್ದು.

ನಿವೇಶನ ದರ = ಯಾವ ಉದ್ದೇಶಕ್ಕೆ ಭೂಪರಿವರ್ತನೆ ಆಗಿರುತ್ತದೆಯೋ ಆ ಉದ್ದೇಶದ (ಅಂದರೆ ವಸತಿ, ಕೈಗಾರಿಕೆ ಮತ್ತು ವಾಣಿಜ್ಯಯೋಪಯೋಗಿ/ ವಸತಿಯೇತರ ಉದ್ದೇಶಗಳು) ಸ್ವತ್ತು/ಜಮೀನುಗಳಿಗೆ ಆಯಾ ಪ್ರದೇಶದ ನಿವೇಶನ ದರವನ್ನು (ವಸತಿಯೇತರ/ವಾಣಿಜ್ಯಯೋಪಯೋಗಿ/ ಸ್ವತ್ತಿನ ದರದೊಂದಿಗೆ) ಅಳವಡಿಸಿಕೊಳ್ಳತಕ್ಕದ್ದು.

NOTARY ★ Y.R. CHANDRASEKAR B.Com., LL.B., Bengaluru City LAW 175 LCL 2016 ★ GOVT. OF KARNATAKA

2. ಪಟ್ಟಣ ಪಂಚಾಯ್ತಿ/ಪುರಸಭೆ/ನಗರಸಭೆ/ಮಹಾನಗರ ಪಾಲಿಕೆ ವ್ಯಾಪ್ತಿಯ "ಹೊರಗೆ ಬರುವ ಸ್ಥಿರಾಸ್ತಿಗಳಿಗೆ" ಸಂಬಂಧಿಸಿದಂತೆ:
ಈ ಕೆಳಕಂಡ ಉದ್ದೇಶಕ್ಕಾಗಿ ಭೂಪರಿವರ್ತನೆಯಾದ ಪೂರ್ಣ ವಿಸ್ತೀರ್ಣದ (ಸರ್ವೆ ನಂಬರಿನ ಸಂಪೂರ್ಣ ವಿಸ್ತೀರ್ಣದಂತೆ ಹಾಗೂ ಭಾಗಶಃ ಇಲ್ಲದಂತೆ) *ಅಭಿವೃದ್ಧಿಹೊಂದದ ಸ್ವತ್ತನ್ನು ಪರಭಾರೆ ಮಾಡಿದಾಗ ಕೆಳಕಂಡಂತೆ ಹೆಚ್ಚಳ ದರವನ್ನು ಮೂಲ ಕೃಷಿ ದರಗಳಿಗೆ ಅಳವಡಿಸತಕ್ಕದ್ದು.

(i)	5 ಗುಂಟೆ ಮೇಲ್ಪಟ್ಟು 10 ಗುಂಟೆವರೆಗಿನ ಜಮೀನುಗಳಿಗೆ ಶೇ 65 ರಷ್ಟು ಆಯಾ ಮೂಲ ಕೃಷಿ ಜಮೀನಿನ ಹೆಚ್ಚಿನ ದರಕ್ಕೆ ಅಳವಡಿಸತಕ್ಕದ್ದು.	
(ii)	ಕೈಗಾರಿಕೋಪಯೋಗಿ	55 % (10 ಗುಂಟೆಗೂ ಹೆಚ್ಚಿನ ವಿಸ್ತೀರ್ಣದ ಜಮೀನುಗಳಿಗೆ)
(iii)	ವಾಸೋಪಯೋಗಿ	65 % (10 ಗುಂಟೆಗೂ ಹೆಚ್ಚಿನ ವಿಸ್ತೀರ್ಣದ ಜಮೀನುಗಳಿಗೆ)
(iv)	ವಾಣಿಜ್ಯೋಪಯೋಗಿ/ವಸತಿಯೇತರ	80 % (10 ಗುಂಟೆಗೂ ಹೆಚ್ಚಿನ ವಿಸ್ತೀರ್ಣದ ಜಮೀನುಗಳಿಗೆ)

***ಅಭಿವೃದ್ಧಿಹೊಂದದ ಸ್ವತ್ತುಗಳು** ಅಂದರೆ: ಭೂಪರಿವರ್ತನೆಯಾದ ನಂತರ ಸಕ್ಷಮ ಪ್ರಾಧಿಕಾರದಿಂದ ಸ್ವತ್ತಿನ ವಿನ್ಯಾಸನಕ್ಷೆಗೆ ಅನುಮೋದನೆ ಪಡೆಯದೆ ಸ್ವತ್ತಿನ ಒಳಗೆ ಮೂಲಭೂತ ಸೌಕರ್ಯಗಳಾದ ಒಳಚರಂಡಿ ವ್ಯವಸ್ಥೆ, ಬಡಾವಣೆಯಲ್ಲಿನ ಸರ್ವ ವೃತ್ತ ರಸ್ತೆಗಳು ಇತ್ಯಾದಿ... ಅಭಿವೃದ್ಧಿಪಡಿಸದೆ ಇರುವ ಪ್ರದೇಶವಾಗಿರುತ್ತದೆ.

3. ಕರ್ನಾಟಕ ಭೂಸುಧಾರಣೆ ಕಾಯ್ದೆ 1961 ರ ಕಲಂ 109ರ ಅಡಿಯಲ್ಲಿ ಕೃಷಿಯೇತರ ಚಟುವಟಿಕೆಗಳಿಗೆ ಜಮೀನು ಖರೀದಿಸಲು ಸರ್ಕಾರದಿಂದ ಅನುಮತಿ ನೀಡಲಾದ ಹಂತದಲ್ಲಿ / ಸಂದರ್ಭದಲ್ಲಿ ಮಾತ್ರ ಪೂರ್ಣ ಸರ್ವೆ ನಂ/ಹಿಸ್ಸಾ ಸರ್ವೆ ನಂ/ಭಾಗಶಃ ಸರ್ವೆ ನಂ 10 ಗುಂಟೆಗೆ ಮೇಲ್ಪಟ್ಟ ವಿಸ್ತೀರ್ಣವುಳ್ಳ ಜಮೀನುಗಳಿಗೆ ಮಾರುಕಟ್ಟೆ ಮಾರ್ಗಸೂಚಿ ದರಗಳನ್ನು ನಿಗದಿಪಡಿಸುವಾಗ ಆಯಾ ಉದ್ದೇಶಕ್ಕೆ ಭೂಪರಿವರ್ತಿತ ಜಮೀನುಗಳ ದರಗಳಂತೆ ಪರಿಗಣಿಸಿ, ಕ್ರಮ ಸಂಖ್ಯೆ 1(ಅ) ಮತ್ತು 2 ರಲ್ಲಿರುವ ದರಗಳನ್ನು ಮಾತ್ರ ವಿಧಿಸಲು ಅವಕಾಶವಿರುತ್ತದೆ. ಇತರೆ ಸಂದರ್ಭಗಳಲ್ಲಿ ಅಂದರೆ, ಸದರಿ ಅನುಮತಿ ನೀಡಿದ ತರುವಾಯದ/ನಂತರದ ವ್ಯವಹಾರಗಳಿಗೆ ಸದರಿ ಕ್ರಮ ಸಂಖ್ಯೆ 1 ಮತ್ತು 2 ರಲ್ಲಿ ನಮೂದಿಸಿರುವ ಸೂಚನೆಗಳು/ ಷರತ್ತುಗಳು ಅನ್ವಯವಾಗುತ್ತವೆ.

4. ಮಾರ್ಗಸೂಚಿ ಪಟ್ಟಿಯಲ್ಲಿ ದರ ನಿಗದಿಪಡಿಸದೇ ಇರುವ ಕೃಷಿ(5 ಗುಂಟೆ ವಿಸ್ತೀರ್ಣದ ವರೆಗಿನ ಜಮೀನು ಸೇರಿ)/ಕೃಷಿಯೇತರ ಜಮೀನುಗಳು/ಸ್ವತ್ತುಗಳಿಗೆ ರಾಷ್ಟ್ರೀಯ ಹೆದ್ದಾರಿ/ಬೈಪಾಸ್/ವರ್ತುಲ ರಸ್ತೆಗಳಿಗೆ ಹೊಂದಿಕೊಂಡಿದ್ದಲ್ಲಿ ಆಯಾ ಪ್ರದೇಶದ ದರಗಳಿಗೆ 50% ರಷ್ಟು, ರಾಜ್ಯ ಹೆದ್ದಾರಿಗಳಿಗೆ ಹೊಂದಿಕೊಂಡಿದ್ದಲ್ಲಿ ಆಯಾ ಪ್ರದೇಶದ ದರಕ್ಕೆ 35% ರಷ್ಟು, ಜಿಲ್ಲಾಮುಖ್ಯ ರಸ್ತೆ ಅಥವಾ 80 ಅಡಿ ಅಗಲದ (ಆರ್ಟೀರಿಯಲ್) ರಸ್ತೆಗೆ ಹೊಂದಿಕೊಂಡಿದ್ದಲ್ಲಿ ಆಯಾ ಪ್ರದೇಶದ ದರಕ್ಕೆ 30% ರಷ್ಟು, ಇತರೆ ರಸ್ತೆಗಳಿಗೆ ಹೊಂದಿಕೊಂಡಿದ್ದಲ್ಲಿ ಆಯಾ ಪ್ರದೇಶದ ದರಗಳ ಶೇ 25% ರಷ್ಟು ಹೆಚ್ಚಿಗೆ ದರ ನಿಗದಿಪಡಿಸುವುದು.

5. ಯಾವುದೇ ಪ್ರದೇಶದಲ್ಲಿರುವ ವಾಣಿಜ್ಯ ಮತ್ತು ವಸತಿಯೇತರ (ಕೈಗಾರಿಕೆಯನ್ನು ಹೊರತುಪಡಿಸಿ) ನಿವೇಶನಗಳಿಗೆ ಆಯಾ ಪ್ರದೇಶಗಳ ವಾಸೋಪಯೋಗಿ ನಿವೇಶನ ದರದ ಮೇಲೆ ಶೇಕಡ 40 ರಷ್ಟು ಹೆಚ್ಚಿಸಿ ದರ ನಿಗದಿಪಡಿಸುವುದು. (ಈಗಾಗಲೇ ವಾಣಿಜ್ಯ /ವಸತಿಯೇತರ ಉದ್ದೇಶಕ್ಕಾಗಿಯೆ ದರ ನಿಗದಿಪಡಿಸುವುದನ್ನು ಹೊರತುಪಡಿಸಿ).

6. ಈಗಾಗಲೇ ಮಾರ್ಗಸೂಚಿಯಲ್ಲಿ ದರ ನಿಗದಿಪಡಿಸದೆ ಇರುವ ವಾಣಿಜ್ಯ/ವಸತಿಯೇತರ ಫ್ಲಾಟ್‌ಗಳಿಗೆ/ಸರ್ವೀಸ್ ಅಪಾರ್ಟ್‌ಮೆಂಟ್‌ಗಳಿಗೆ ವಾಸೋಪಯೋಗಿ ಅಪಾರ್ಟ್‌ಮೆಂಟ್/ಫ್ಲಾಟ್‌ಗಳ ದರದ 30% ರಷ್ಟು ಹಾಗೂ ವಾಣಿಜ್ಯ (ಮಾಲ್/ಮಲ್ಟಿಪ್ಲೆಕ್ಸ್) ಗೆ ಶೇ 40 ರಷ್ಟು ಹೆಚ್ಚಿಗೆ ನಿಗದಿಪಡಿಸುವುದು. (ಸ್ಥಳೀಯ ಸಂಸ್ಥೆ/ಪ್ರಾಧಿಕಾರ ಅನುಮೋದಿಸಿದ ನಕ್ಷೆಯಂತೆ).

7. ಮೂಲೆ ನಿವೇಶನಗಳಿಗೆ ಅಥವಾ ಯಾವುದೇ ಎರಡು ಕಡೆ ರಸ್ತೆ ಅಥವಾ ಉದ್ಯಾನವನದ ಅಭಿಮುಖ ನಿವೇಶನಗಳಿಗೆ ಆಯಾ ಪ್ರದೇಶದ ನಿವೇಶನ ದರಗಳ 10% ರಷ್ಟು ಹೆಚ್ಚಿಗೆ ದರ ನಿಗದಿಪಡಿಸುವುದು.

8. ಈಗಾಗಲೇ ಮಾರ್ಗಸೂಚಿಯಲ್ಲಿ ಕೈಗಾರಿಕೋಪಯೋಗಿ ಎಂದು ಸ್ಪಷ್ಟಪಡಿಸಿರುವ ಪ್ರದೇಶಗಳಿಗೆ ನಿಗದಿಪಡಿಸಿರುವ ನಿವೇಶನದ ದರವನ್ನು ಅನುಸರಿಸತಕ್ಕದ್ದು. ಈ ಪ್ರದೇಶಗಳನ್ನು ಹೊರತುಪಡಿಸಿ ಇತರೆ ಎಲ್ಲಾ ಪ್ರದೇಶಗಳಲ್ಲಿ ಇರುವ ಕೈಗಾರಿಕೋಪಯೋಗಿ ನಿವೇಶನಗಳಿಗೆ ವಾಸೋಪಯೋಗಿ ನಿವೇಶನ ದರ ನಿಗದಿಪಡಿಸುವುದು.

9. ವಿಲ್ಲಾಮೆಂಟ್ ಮತ್ತು ಅಪಾರ್ಟ್‌ಮೆಂಟ್‌ಗಳ ಅಥವಾ ಯಾವುದೇ ದಸ್ತಾವೇಜಿನಲ್ಲಿ ಸೂಪರ್ ಬಿಲ್ಟಪ್ ಏರಿಯಾ ದರಗಳನ್ನು ಅನ್ವಯಿಸುವಲ್ಲಿ ಓಪನ್ ಟೆರೇಸ್‌ಗೆ/ ಗಾರ್ಡನ್ ಏರಿಯಾಗೆ/ ಎಕ್ಸ್‌ಕ್ಲೂಸಿವ್ ಯೂಸೇಜ್ ಏರಿಯಾಗಳಿಗೆ 33.33% ರಷ್ಟು ಸೂಪರ್ ಬಿಲ್ಟಪ್ ಏರಿಯಾ ದರಗಳನ್ನು ನಿಗದಿಪಡಿಸುವುದು.

10. **ಅನುಬಂಧ-3** ರಲ್ಲಿಯ ಅಪಾರ್ಟ್‌ಮೆಂಟ್/ಫ್ಲಾಟ್ ದರಗಳು ಸೂಪರ್‌ಬಿಲ್ಟಪ್ ಏರಿಯಾದ ಪ್ರಾಥಮಿಕ ದರಗಳಾಗಿರುತ್ತವೆ (only basic rate); ಅಪಾರ್ಟ್‌ಮೆಂಟಿನ ಒಟ್ಟು ಮೌಲ್ಯ = ಸೂಪರ್‌ಬಿಲ್ಟಪ್ ಏರಿಯಾದ ಪ್ರಾಥಮಿಕ ದರದ ಮೌಲ್ಯ (only basic rate)+ ಹೆಚ್ಚುವರಿ ವಿಶೇಷ ಸೌಲಭ್ಯ ಗುಂಪಿನ ಮೌಲ್ಯ+ ಹೆಚ್ಚುವರಿ ಅಂತಸ್ತಿನ ಮೌಲ್ಯ. **ಅನುಬಂಧ-2** ರಲ್ಲಿಯ ಅಪಾರ್ಟ್‌ಮೆಂಟ್ ದರಗಳಿಗೆ ಹೆಚ್ಚುವರಿ ಅಂತಸ್ತಿನ ಮೌಲ್ಯ ಮಾತ್ರ ಅಳವಡಿಸಬೇಕು.

11. ಅನುಬಂಧ-2ರಲ್ಲಿಯ ವಿಲ್ಲಾ / ರೋ ಹೌಸ್‌ಗಳ ದರಗಳು ವಿಲ್ಲಾ / ರೋ ಹೌಸ್‌ಗಳ ನಿವೇಶನದ ದರಗಳಾಗಿದ್ದು. ವಿಲ್ಲಾ / ರೋ ಹೌಸ್ ಒಟ್ಟು ಮೌಲ್ಯ =ವಿಲ್ಲಾ / ರೋ ಹೌಸ್‌ಗಳ ನಿವೇಶನ ದರದ ಮೌಲ್ಯ + ವಿಲ್ಲಾ / ರೋ ಹೌಸ್ ಕಟ್ಟಡದ ಮೌಲ್ಯ + ಹೆಚ್ಚುವರಿ ವಿಶೇಷ ಸೌಲಭ್ಯ ಗುಂಪಿನ ಮೌಲ್ಯ. ಹೊಸದರಗಳನ್ನು ನಿಗದಿಪಡಿಸುವಲ್ಲಿ ಈ ಅಂಶಗಳನ್ನು ಪರಿಗಣಿಸ ಬೇಕು.

12. ನೋಂದಣಿ ಪೂರ್ವದಲ್ಲಿ ಹೊಸ ಬಡಾವಣೆ, ಬಹುಮಹಡಿ ಕಟ್ಟಡ, ಅಪಾರ್ಟ್‌ಮೆಂಟ್/ವಿಲ್ಲಾ, ರೋ ಹೌಸ್‌ಗಳು/ ವಿಲ್ಲಾಮೆಂಟ್/ಹೈಬ್ರಿಡ್/ಇತರೆಗಳಿಗೆ ಅನುಭಂದ 3 ರಲ್ಲಿಯ ಪ್ರಸ್ತಾವನೆಗಳನ್ನು ಹೊರತುಪಡಿಸಿ, ಉಳಿದ ಯಾವುದೇ ರೀತಿಯ ಯೋಜನೆಗಳು ಬಂದಲ್ಲಿ ಕೇಂದ್ರ ಮೌಲ್ಯಮಾಪನ ಸಮಿತಿಯಿಂದ ದರವನ್ನು ನಿಗದಿಪಡಿಸಿಕೊಳ್ಳತಕ್ಕದ್ದು.

13. ಸ್ಥಳೀಯ ಸಂಸ್ಥೆಗಳು ಉನ್ನತೀಕರಣಗೊಂಡಲ್ಲಿ/ಮೇಲ್ದರ್ಜೆಗೊಂಡ ದಿನಾಂಕದಿಂದ ಸಂಬಂಧಿಸಿದ ದರಗಳನ್ನ ಅಳವಡಿಸಬೇಕು. (ಉದಾ: ನಗರಸಭೆಯು ಮಹಾನಗರ ಪಾಲಿಕೆಯಾದಾಗ/ ಪಟ್ಟಣಪುರಸಭೆಗಳು ನಗರಸಭೆಯಾದಾಗ/ ಪಂಚಾಯ್ತಿ ಪಟ್ಟಣಪಂಚಾಯ್ತಿಯಾಗಿ ಉನ್ನತೀಕರಣಗೊಂಡಲ್ಲಿ/ಮೇಲ್ದರ್ಜೆಗೊಂಡಾಗ ಸಂಬಂಧಿಸಿದ ಪಟ್ಟಣಪಂಚಾಯ್ತಿ/ಪುರಸಭೆ/ ನಗರಸಭೆ/ಮಹಾನಗರ ಪಾಲಿಕೆಯ ಕಟ್ಟಡ ದರಗಳನ್ನು ಅಳವಡಿಸಬೇಕು).

14. ಸ್ಥಿರಾಸ್ತಿಗಳ ಮಾರ್ಗಸೂಚಿ ದರಪಟ್ಟಿಯಲ್ಲಿನ ದರಗಳು ಜಾರಿಗೆ ಬಂದ ದಿನಾಂಕದಿಂದ ನಂತರ ನೋಂದಣಿಗೆ ಹಾಜರುಪಡಿಸುವ ದಸ್ತಾವೇಜುಗಳಿಗೂ ಪ್ರಕಟಣೆಗೊಂಡ ಪಟ್ಟಿಯಲ್ಲಿನ ಮೌಲ್ಯದಂತೆಯೇ ದರವನ್ನು ಪರಿಗಣಿಸತಕ್ಕದ್ದಾಗಿರುತ್ತದೆ. ಪ್ರಕಟಣೆಗೊಂಡ ದಿನಾಂಕದಿಂದ ಹಿಂದೆ ಬರೆಯಲಾದ ಪತ್ರಗಳೂ ಸಹ ಈ ಪಟ್ಟಿಯಲ್ಲಿನ ದರಗಳಂತೆ ಮೌಲ್ಯವನ್ನು ನಿರ್ಧರಿಸತಕ್ಕದ್ದಾಗಿರುತ್ತದೆ. ತಪ್ಪಿದಲ್ಲಿ ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 45(ಎ)(1)ರ ಅಡಿಯಲ್ಲಿ ಕ್ರಮ ಜರುಗಿಸತಕ್ಕದ್ದು.

15. 1 ಚದರ ಮೀಟರ್=10.764 ಚದರ ಅಡಿಗಳು ಶುಲ್ಕ ಲೆಕ್ಕ ಹಾಕಲು ಉಪಯೋಗಿಸಬೇಕು.

16. Super built-up area in square meter=1.25 X Carpet Area in square meter.
ಉದಾ:- ಒಂದು ಫ್ಲಾಟ್‌ನಲ್ಲಿ 120 ಚಮೀ ಕಾರ್‌ಪೆಟ್ ಏರಿಯಾ ಇದ್ದಲ್ಲಿ

ಸೂಪರ್ ಬಿಲ್ಟಪ್ ಏರಿಯಾ ಚದರ ಮೀಟರ್= 1.25 X 120 = 150 ಚದರ ಮೀಟರ್ ಸೂಪರ್ ಬಿಲ್ಟಪ್ ಏರಿಯಾ

ದರಪಟ್ಟಿಯಲ್ಲಿರುವ ಅಪಾರ್ಟ್‌ಮೆಂಟ್‌ನ ಫ್ಲಾಟ್‌ನ ಸೂಪರ್ ಬಿಲ್ಟಪ್ ಏರಿಯಾ ಪ್ರತಿ ಚದರ ಮೀಟರ್ ದರ ರೂ. 25000/-

ಫ್ಲಾಟ್‌ನ ಒಟ್ಟು ಮೌಲ್ಯ = ರೂ 150 X 25000 = ರೂ 37,50,000/-

"ಅಥವಾ"

ಫ್ಲಾಟ್‌ನ ಒಟ್ಟು ಮೌಲ್ಯ = (1.25 X120)X25000
=Rs. 37,50,000/-

2. ಕೇಂದ್ರ ಮೌಲ್ಯ ಮಾಪನ ಸಮಿತಿ.

ಮೌಲ್ಯಮಾಪನಕ್ಕೆ ಅನುಸರಿಸಬೇಕಾದ PWD ಪ್ರಸ್ತಾವಿತ ಕಟ್ಟಡಗಳ ದರಗಳು (ಲೋಕೋಪಯೋಗಿ ಇಲಾಖೆ ಪತ್ರ ದಿ: 29-10-2018)

ಉಲ್ಲೇಖ : ಅಧಿಸೂಚನೆ ಸಂಖ್ಯೆ : ನೋಕಮು/ಸಿವಿಸಿ/485/2017-18, ದಿನಾಂಕ : 05-12-2018.

ಕ್ರ.ಸಂ	ಕಟ್ಟಡದ ತರಹ	ನೆಲಮಹಡಿ	ಮೇಲ್ಮಹಡಿ
		ಪ್ರತಿ ಚ.ಮೀ ರೂಗಳಲ್ಲಿ	ಪ್ರತಿ ಚ.ಮೀ ರೂಗಳಲ್ಲಿ
1	ಆರ್.ಸಿ.ಸಿ ಛಾವಣಿ, ಕಾಂಕ್ರೀಟ್/ಇಟ್ಟಿಗೆ ಗೋಡೆ, ಮಾರ್ಬಲ್, ನೆಲಹಾಸು, ತೇಗದ ಮರದ ಕಿಟಕಿ ಮತ್ತು ಬಾಗಿಲುಗಳು	18183	16298
2	ಆರ್.ಸಿ.ಸಿ ಛಾವಣಿ , ಇಟ್ಟಿಗೆ ಗೋಡೆ, ಗ್ರಾನೈಟ್ ನೆಲಹಾಸು, ತೇಗದ ಮರದ ಕಿಟಕಿ ಮತ್ತು ಬಾಗಿಲುಗಳು	16963	15300
3	ಆರ್.ಸಿ.ಸಿ ಛಾವಣಿ, ಕಾಂಕ್ರೀಟ್/ಇಟ್ಟಿಗೆ ಗೋಡೆ, ವಿಟ್ರಿಫೈಡ್ ನೆಲಹಾಸು, ಹೊನ್ನೆಮರದ ಕಿಟಕಿ ಮತ್ತು ಬಾಗಿಲುಗಳು	14690	13000
4	ಆರ್.ಸಿ.ಸಿ ಛಾವಣಿ, ಕಾಂಕ್ರೀಟ್/ಇಟ್ಟಿಗೆ ಗೋಡೆ, ಮೊಸಾಯಿಕ್/ ಪಾಲಿಷ್ಡ್/ ಸೆರಾಮಿಕ್/ ಶಾಹಬಾದ ಕಡಪ/ ಬೇತಮ್ ಚೆರ್ಲಿ/ ರೆಡಾಕ್ಸೈಡ್ ನೆಲಹಾಸು, ಕಾಡಿನ ಮರ/ ಉಕ್ಕಿನ ಕಿಟಕಿ ಮತ್ತು ಬಾಗಿಲುಗಳು.	14524	12584
5	ಮದ್ರಾಸ್ ತಾರಸಿ/ ಕಡಪ ತಾರಸಿ, ಮಂಗಳೂರು ಹೆಂಚು, ಇಟ್ಟಿಗೆ/ ಮಣ್ಣಿನ ಗೋಡೆ, ಎ.ಸಿ.ಶೀಟ್ ಛಾವಣಿ, ರೆಡಾಕ್ಸೈಡ್ ನೆಲಹಾಸು, ಕಾಡಿನ ಮರದ ಕಿಟಕಿ ಮತ್ತು ಬಾಗಿಲುಗಳು	11518	10064

ಷರಾ:

1. ಮೇಲ್ಕಂಡ ದರಗಳಲ್ಲಿ ಕನಿಷ್ಠ ನಾಗರೀಕ ಸೌಲಭ್ಯಗಳಾದ ಕುಡಿಯುವ ನೀರು, ಒಳಚರಂಡಿ/ನೈರ್ಮಲೀಕರಣ ಹಾಗೂ ವಿದ್ಯುತ್ ವೆಚ್ಚಗಳು ಒಳಗೊಂಡಿರುತ್ತವೆ.
2. ತಳಮಹಡಿ ಕಟ್ಟಡ (cellar, partial cellar& stilt) ಪಾರ್ಕಿಂಗ್‌ಗಾಗಿ/ವಾಹನ ನಿಲುಗಡೆಗಾಗಿ ನಿರ್ಮಿಸಿದ ಕಟ್ಟಡಕ್ಕೆ ನೆಲಮಹಡಿಯ ಕಟ್ಟಡದ ದರದ ಶೇಕಡ 66.00 ರಷ್ಟು(2/3) ದರಗಳನ್ನು ಅಳವಡಿಸಿಕೊಳ್ಳಬೇಕು.
3. ಬಿ.ಎಂ.ಆರ್.ಡಿ.ಎ ವ್ಯಾಪ್ತಿಗೆ ಶೇ 3.00 ರಷ್ಟು ಏರಿಯಾ ವೇಟೇಜ್ ಸೇರಿದ ಮೇಲ್ಕಂಡ ದರಗಳಾಗಿರುತ್ತವೆ. ಈ ದರಗಳಿಗೆ ಜಿ.ಎಸ್.ಟಿ ಸೇರಿರುವುದಿಲ್ಲ.

NOTARY * GOVT. OF KARNATAKA * Y.R. CHANDRASEKAR B.Com., LL.B. Bengaluru City LAW 175 LCL 2016

3. ವಾಹನ ನಿಲ್ದಾಣ ದರಗಳು

ಕ್ರ.ಸಂ	ಸ್ವತ್ತಿನ ಒಟ್ಟು ಮೌಲ್ಯ ಅ) ನಿವೇಶನ ಮತ್ತು ಕಟ್ಟಡದ ಸ್ವತ್ತುಗಳಿಗೆ ಆ) ಅಪಾರ್ಟ್‌ಮೆಂಟ್ ಕಟ್ಟಡಗಳಿಗೆ (ಸೂಪರ್ ಬಿಲ್ಟಪ್ ಮೌಲ್ಯ + ಹೆಚ್ಚುವರಿ ಅಂತಸ್ತಿನ ಮೌಲ್ಯ + ಹೆಚ್ಚುವರಿ ವಿಶೇಷ ಸೌಲಭ್ಯ	ಮೇಲ್ಹಾವಣಿಯುಳ್ಳ (Covered Car parking)	ಮೇಲ್ಹಾವಣಿ ರಹಿತ (Open Car parking)
1	ರೂ.50,00,000–00 ವರೆಗೆ	ರೂ. 1,50,000	ರೂ.1,35,000
2	ರೂ.50,00,001–00 ರಿಂದ ರೂ.1,00,00,000–00 ವರೆಗೆ	ರೂ. 2,00,000	ರೂ.1,50,000
3	ರೂ.1,00,00,001–ರಿಂದ ಮೇಲ್ಪಟ್ಟು	ರೂ. 2,50,000	ರೂ.2,00,000

4. ಅಪಾರ್ಟ್‌ಮೆಂಟ್/ಫ್ಲಾಟ್‌ಗಳ ಮೇಲಂತಸ್ತುಗಳಿಗೆ ಹೆಚ್ಚುವರಿ ದರ ನಿಗಧಿಪಡಿಸುವ ಬಗ್ಗೆ.

ಕ್ರ ಸಂ	ಅಂತಸ್ತುಗಳು	ಶೇಕಡಾವಾರು ಹೆಚ್ಚುವರಿ	ಕ್ರ ಸಂ	ಅಂತಸ್ತುಗಳು	ಶೇಕಡಾವಾರು ಹೆಚ್ಚುವರಿ
1	0 ಯಿಂದ 5 ಅಂತಸ್ತಿನ ವರೆಗೆ	ಯಾವುದೆ ಹೆಚ್ಚುವರಿ ದರ ಇಲ್ಲ.	7	11ನೇ ಅಂತಸ್ತಿಗೆ	ಸೂಪರ್ ಬಿಲ್ಟಪ್ ಏರಿಯಾದ ಮೌಲ್ಯ+ 3.0%
2	6ನೇ ಅಂತಸ್ತಿಗೆ	ಸೂಪರ್‌ಬಿಲ್ಟಪ್ ಏರಿಯಾದ ಮೌಲ್ಯ+ 0.5%	8	12ನೇ ಅಂತಸ್ತಿಗೆ	ಸೂಪರ್ ಬಿಲ್ಟಪ್ ಏರಿಯಾದ ಮೌಲ್ಯ + [illegible]5%
3	7ನೇ ಅಂತಸ್ತಿಗೆ	ಸೂಪರ್‌ಬಿಲ್ಟಪ್ ಏರಿಯಾದ ಮೌಲ್ಯ+ 1.0%	9	13ನೇ , ಅಂತಸ್ತಿಗೆ	ಸೂಪರ್ ಬಿಲ್ಟಪ್ ಏರಿಯಾದ ಮೌಲ್ಯ+ 4,0.%
4	8ನೇ ಅಂತಸ್ತಿಗೆ	ಸೂಪರ್‌ಬಿಲ್ಟಪ್ ಏರಿಯಾದ ಮೌಲ್ಯ+ 1.5%	10	14ನೇ ಅಂತಸ್ತಿಗೆ	ಸೂಪರ್ ಬಿಲ್ಟಪ್ ಏರಿಯಾದ ಮೌಲ್ಯ+ 4.5%
5	9ನೇ ಅಂತಸ್ತಿಗೆ	ಸೂಪರ್‌ಬಿಲ್ಟಪ್ ಏರಿಯಾದ ಮೌಲ್ಯ +2.0%	11	15ನೇ ಅಂತಸ್ತು ಮತ್ತು ಮೇಲ್ಪಟ್ಟು	ಸೂಪರ್ ಬಿಲ್ಟಪ್ ಏರಿಯಾದ ಮೌಲ್ಯ+5.0%
6	10ನೇ ಅಂತಸ್ತಿಗೆ	ಸೂಪರ್‌ಬಿಲ್ಟಪ್ ಏರಿಯಾದ ಮೌಲ್ಯ+ 2.5%			

ಅಪಾರ್ಟ್‌ಮೆಂಟ್/ಫ್ಲಾಟ್ ಮೇಲಂತಸ್ತುಗಳಿಗೆ ಹೆಚ್ಚುವರಿ ದರ ನಿಗಧಿಪಡಿಸುವ ಬಗ್ಗೆ. (ಉದಾಹರಣೆ: 30,00,000 ಮೌಲ್ಯದ (1000 ಚದರ ಮೀಟರ್ X ರೂ.3000 ಪ್ರತಿ ಚದರ ಮೀಟರ್‌ಗೆ) ಅಪಾರ್ಟ್‌ಮೆಂಟ್‌ಗೆ ಮೇಲ್ಕಂಡ ದರಗಳಂತೆ ಅಗುವ ಹೆಚ್ಚುವರಿ ಮೌಲ್ಯ).

NOTARY ★ GOVT. OF KARNATAKA

ಕ್ರ ಸಂ	ಅಂತಸ್ತುಗಳು	ಶೇಕಡಾವಾರು	ಕ್ರ ಸಂ	ಅಂತಸ್ತುಗಳು	ಶೇಕಡಾವಾರು
1	0 ಯಿಂದ 5 ಅಂತಸ್ತು	30,00,000+ ಯಾವುದೇ ಹೆಚ್ಚುವರಿ ದರ ಇಲ್ಲ.	7	11ನೇ ಅಂತಸ್ತು	30,00,000+(30,00,000X 3.0%)=30,90,000/-
2	6ನೇ ಅಂತಸ್ತು	30,00,000+(30,00,000X 0.5%)=30,15,000/-	8	12ನೇ ಅಂತಸ್ತು	30,00,000+(30,00,000X 3.5%)=31,05,000/-
3	7ನೇ ಅಂತಸ್ತು	30,00,000+(30,00,000X 1.0%)=30,30,000/-	9	13ನೇ ಅಂತಸ್ತು	30,00,000+(30,00,000X 4.0%)=31,20,000/-
4	8ನೇ ಅಂತಸ್ತು	30,00,000+(30,00,000X 1.5%)=30,45,000/-	10	14ನೇ ಅಂತಸ್ತು	30,00,000+(30,00,000X4.5%)=31,35,000/-
5	9ನೇ ಅಂತಸ್ತು	30,00,000+(30,00,000X 2.0%)= 30,60,000/-	11	15ನೇ ಅಂತಸ್ತು ಮತ್ತು ಮೇಲ್ಪಟ್ಟು	30,00,000+(30,00,000X5.0%)=31,50,000/-
6	10ನೇ ಅಂತಸ್ತು	30,00,000+(30,00,000X 2.5%)=30,75,000/-			

5. ಅಪಾರ್ಟ್‌ಮೆಂಟ್/ವಿಲ್ಲಾ/ವಿಲ್ಲಾಮೆಂಟ್/ ಟೆನೆಮೆಂಟ್/ ಗೇಟೆಡ್ ಕಮ್ಯೂನಿಟಿ ಹೌಸ್‌ಗಳ ವಿಶೇಷ ಸವಲತ್ತುಗಳಿಗಾಗಿ ಈ ಕೆಳಕಂಡಂತೆ ಹೆಚ್ಚುವರಿ ದರ ನಿಗಧಿಪಡಿಸುವುದು.

1) ವಿನಾಯಿತಿ ನೀಡಲಾಗಿರುವ ಗುಂಪಿನೊಂದಿಗೆ ಯಾವುದೇ 4 ಕೆಳಕಂಡ ಗುಂಪುಗಳ ವಿಶೇಷ ಸವಲತ್ತುಗಳು ಇದ್ದಲ್ಲಿ.	ಆಯಾ ಪ್ರದೇಶದ / ರಸ್ತೆಯ ಸೂಪರ್‌ಬಿಲ್ಟಪ್ ಏರಿಯಾದ ದರ ಮಾತ್ರ.
2) ಪ್ರತಿ ಹೆಚ್ಚುವರಿ ಕೆಳಕಂಡ ಗುಂಪುಗಳ ವಿಶೇಷ ಸವಲತ್ತುಗಳು ಇದ್ದಲ್ಲಿ.	ಆಯಾ ಪ್ರದೇಶದ / ರಸ್ತೆಯ ಸೂಪರ್‌ಬಿಲ್ಟಪ್ ಏರಿಯಾದ ದರ ಅನ್ವಯಿಸಿದ ಸ್ವತ್ತಿನ ಒಟ್ಟು ಮೌಲ್ಯ (Including higher floor additional rate but excluding Car Parking rate)+ಶೇಕಡಾ 0.75% ರಷ್ಟು ಹೆಚ್ಚುವರಿ ದರ. (ಅಂದರೆ 5 ಗುಂಪುಗಳಿಗೆ – 0.75%, 6 ಗುಂಪುಗಳಿಗೆ 1.5%, 7 ಗುಂಪುಗಳಿಗೆ 2.25%, 8 ಗುಂಪುಗಳಿಗೆ 3%, 9 ಗುಂಪುಗಳಿಗೆ 3.75%, 10 ಗುಂಪುಗಳಿಗೆ 4.5%, 11 ಗುಂಪುಗಳಿಗೆ 5.25%, 12 ಗುಂಪುಗಳಿಗೆ 6%, 13 ಗುಂಪುಗಳಿಗೆ 6.75%, 14 ಮತ್ತು ಹೆಚ್ಚುವರಿ ಗುಂಪಿನ ಸೌಲಭ್ಯಗಳಿಗೆ ಗರಿಷ್ಠ 7.5%).

6. **2018-19 ನೇ ಸಾಲಿನ ಮಾರ್ಗಸೂಚಿ ದರಪಟ್ಟಿಯ ಅನುಬಂಧ-3 ನ್ನು ಅನುಷ್ಠಾನಗೊಳಿಸುವಲ್ಲಿ ಹಳೇಯ ಅಪಾರ್ಟ್‌ಮೆಂಟ್‌ಗಳಲ್ಲಿ ಸುಮಾರು *ಹತ್ತು ವರ್ಷಗಳಿಗೂ ಹೆಚ್ಚು ಹಳೇಯದಾದ ಅಪಾರ್ಟ್‌ಮೆಂಟ್‌ಗಳ ಮಾರ್ಗಸೂಚಿ ದರ ನಿಗದಿಪಡಿಸುವ ಪ್ರಸ್ತಾವನೆಗೆ ಸಂಬಂಧಿಸಿದಂತೆ:**

ಸಾಮಾನ್ಯವಾಗಿ ಅಪಾರ್ಟ್‌ಮೆಂಟ್ ನಿರ್ಮಾಣವಾದ *ಹತ್ತು ವರ್ಷಗಳ ನಂತರ (ಸಕ್ಷಮ ಪ್ರಾಧಿಕಾರದಿಂದ ಮಂಜೂರಾದ ನಕ್ಷೆ, Occupancy Certificate ಇತ್ಯಾದಿ ದಾಖಲೆಗಳ ಪ್ರಕಾರ) ಶೇ. 95 ಕ್ಕೂ ಹೆಚ್ಚಿನ ಫ್ಲಾಟ್‌ಗಳು ಖರೀದಿಸಲಾಗಿದ್ದು, ಮನಃ ಎರಡನೇ ಬಾರಿ ನೋಂದಣಿಗಾಗಿ ಬರುತ್ತಿರುವುದು ಕಂಡುಬರುತ್ತದೆ, ಅಂತಹ ಸಂದರ್ಭದಲ್ಲಿ ಖರೀದಿದಾರರು ಅಥವಾ ಮಾರಾಟಗಾರರು ನಿವೇಶನದ ವಿಸ್ತೀರ್ಣ ಷೆಡ್ಯುಲ್-ಎ ರಂತೆ 500 ಚ.ಮೀ ಗೂ ಹೆಚ್ಚು ಇದ್ದಲ್ಲಿ ಕೇಂದ್ರ ಮೌಲ್ಯಮಾಪನ ಸಮಿತಿಗೆ ದರ ನಿಗದಿಪಡಿಸಲು ಅಗತ್ಯ ದಾಖಲೆ ಪ್ರತಿಗಳೊಂದಿಗೆ ಪ್ರಸ್ತಾವನೆ ಸಲ್ಲಿಸಿ ಮಾರ್ಗಸೂಚಿ ದರ ನಿಗದಿಪಡಿಕೊಳ್ಳಲು ಸಾರ್ವಜನಿಕರಿಗೆ (Single Purchaser ಏಕ ಖರೀದಿದಾರರಿಗೆ)

ಅಸಲು ಅರ್ಜಿ ಸಂಖ್ಯೆ 625 ನೇ ಹಾಳೆ 9

ತೊಂದರೆ ಆಗದಂತೆ *ಹತ್ತು ವರ್ಷಗಳಿಗೂ ಹೆಚ್ಚು ಹಳೇಯದಾದ ಅಪಾರ್ಟ್‌ಮೆಂಟ್‌ಗಳಿಗೆ ಮಾತ್ರ ಅನ್ವಯವಾಗುವಂತೆ ಸೂಕ್ತ ದಾಖಲೆಗಳನ್ನು (ಸಕ್ಷಮ ಪ್ರಾಧಿಕಾರದಿಂದ ನೀಡುವ ಕಟ್ಟಡ ಪರವಾನಿಗೆ ನಕ್ಷೆ, ಪ್ರಾರಂಭಿಕ ಪ್ರಮಾಣ ಪತ್ರ, ಸ್ವಾಧೀನ ಅನುಭವ ಪ್ರಮಾಣ ಪತ್ರ ಇತ್ಯಾದಿ) ಪರಿಶೀಲಿಸಿ 2017–18 ನೇ ಸಾಲಿನ ಮಾರ್ಗಸೂಚಿ ದರಪಟ್ಟಿಯ ಅನುಬಂಧ–3 ರನ್ವಯ (ಷೆಡ್ಯೂಲ್–ಎ ವಿಸ್ತೀರ್ಣದ ಮಿತಿ ಇಲ್ಲದಂತೆ) ಕೋಷ್ಟಕವನ್ನು ಮತ್ತು ವಿಶೇಷ ಸೂಚನೆಯ ಅಂಶಗಳನ್ನು ಉಪಯೋಗಿಸಿಕೊಂಡು ಕಟ್ಟಡದ ನೋಂದಣಿ ಮೌಲ್ಯ ನಿರ್ಧರಿಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ.

- ರೇಡಿರೇಕನರ್ ದರಕ್ಕೆ ಕಡಿಮೆ ಇಲ್ಲದಂತೆ ವಿಶೇಷ ಸೌಲಭ್ಯಗಳ ಹೆಚ್ಚುವರಿ ದರವನ್ನು ಅಳವಡಿಸಿಕೊಂಡು ಮಾರ್ಗಸೂಚಿ ದರ ನಿಗದಿಪಡಿಸುವುದು.
- ಪ್ರತಿ ಮಾಹೇಯಲ್ಲಿ ಪ್ರಸ್ತಾವಿತ ಅಪಾರ್ಟ್‌ಮೆಂಟ್‌ಗೆ ನಿಗದಿಪಡಿಸಿದ ಮಾರ್ಗಸೂಚಿ ದರ, (ಗ್ರಾಮ, PID ನಂ, ಸರ್ವೆ ನಂ, ಖಾತಾ ನಂ, ರೇರಾ ಸಂಖ್ಯೆ) ಈ ಎಲ್ಲಾ ವಿವರಗಳನ್ನು ಒಳಗೊಂಡ ಮಾಹಿತಿಯನ್ನು ಕೇಂದ್ರ ಮೌಲ್ಯಮಾಪನ ಸಮಿತಿಗೆ ಸಲ್ಲಿಸಿ ಘಟನೋತ್ತರ ಮಂಜೂರಾತಿ ಪಡೆದು, ರಾಜ್ಯಪತ್ರದಲ್ಲಿ ಪ್ರಕಟಿಸಿಕೊಳ್ಳತಕ್ಕದ್ದು.
- ನಿಗದಿಪಡಿಸಿದ ಅಪಾರ್ಟ್‌ಮೆಂಟ್‌ನ ಮಾರ್ಗಸೂಚಿ ದರವನ್ನು (ರಾಜ್ಯ ಪತ್ರದಲ್ಲಿರುವಂತೆ) ಗಣಕಶಾಖೆಯಲ್ಲಿ ಕಾವೇರಿ ತಂತ್ರಾಂಶದಲ್ಲಿ ಅಳವಡಿಸಿಕೊಳ್ಳತಕ್ಕದ್ದು.

ಸೂಚನೆ: * ನೋಂದಣಿ ಸಮಯದಲ್ಲಿ ಹಾಜರುಪಡಿಸುವ ದಾಖಲೆಗಳಂತೆ ಪ್ರಸ್ತಾಪಿತ ಕಟ್ಟಡವೂ ಸಕ್ಷಮ ಪ್ರಾಧಿಕಾರವು ನೀಡುವ ದಾಖಲೆಗಳಂತೆ ಹತ್ತು ವರ್ಷ ಹಳೆಯದಾಗಿರತಕ್ಕದ್ದು.

NOTARY ★ KARNATAKA ★ GOVT. OF — V.R. CHANDRASEKAR B.Com., LL.B., Bengaluru City LAW/175 LOL 2016

List of Special Amenities provided for Apartments / Villas / Villaments / Tenament / Gated Community Houses.

(Select the amenities by underlining the same and put ✓ mark in column no 3).

Group No	Special Amenities / Facilities /Benefits	✓ Mark
1	2	3
Exempted	a) Rain Water Harvesting, Solar Power, Solar water heater, Fire fighting, Fire Prevention, Green Building concept low carbon material usage and similar types of amenities. b) Sewage treatment plant, solid waste management, individual garbage chute, Reflective roofs, water recycling / reuse Plants. (These amenities is fully exempted)	
1	Club house, Community hall, Conference hall, party hall, Card room, Reading room, library, Banquet hall, party area, party lawn and similar types of amenities.	
2	Jogging track, Running track, Cycling track, Walking track, Pebble pathway, Reflexology path and similar types of amenities.	
3	Children play area, tot lot, children game area, Garden, Water body, Decorative pool, Plantation Garden, Barbeque pits, crèche, landscape area, fountain and similar types of amenities.	
4	Canteen, Mall, Commercial space, ATM, Bank, Hopcom, Janatha Bazar, Nandini Milk outlet, Provision store, Parlor, Cafeteria, Super market, Plaza and similar types of amenities.	

625
10

Group No	Special Amenities / Facilities /Benefits	Mark
1	2	3
5	All type of outdoor play area, Badminton, Tennis, Basket ball, Volly ball, Base ball, Cricket, Foot ball, Hockey and similar types of amenities.	
6	All type of indoor game area, squash, snooker, Table tennis, carom room, Indoor games area and similar types of amenities.	
7	Swimming pool indoor, Kids pool, wading pool, aqua gym and similar types of amenities.	
8	Cargo lift, elevator, Mechanical lift for car park, High speed elevator and similar types of amenities.	
9	Surveillance of common area, manned security with video surveillance intelligent security, Motion sensor based lighting multi camera security, CCTV, Gated community, Intercom, Wifi Internet parlor, Video conference facility, Generator, UPS, Kiosk, Visitor Tracking system and similar types of amenities.	
10	Helipad, Golf field.	
11	Outdoor Amphitheatre, Open air theatre, Open stage and similar types of amenities.	
12	Health clinic, Ayurvedic parlor, Massage parlour, Beauty parlour, Spa, Aerobics, Yoga meditation, Unisex parlour, Steam & Sauna Jacuzzi, Gym, Day care center, Health club and similar types of amenities.	
13	Indoor Amphi theatre, Dance & Karaoke hall, Drama stage, Home theater hall.	
14	Home automation, smart home, IP door lock, prepaid power supply, piped cooking gas supply, gas bank, gas detector.	

ಸೂಚನೆ : ಅಪಾರ್ಟ್‌ಮೆಂಟ್/ಫ್ಲಾಟ್/ವಿಲ್ಲಾ/ವಿಲ್ಲಾಮೆಂಟ್ಸ್/ರೋ ಹೌಸ್ ಇತ್ಯಾದಿಗಳ ನೋಂದಣಿ ಸಮಯದಲ್ಲಿ ದಸ್ತಾವೇಜಿನೊಂದಿಗೆ ಕರ್ನಾಟಕ ಮುದ್ರಾಂಕ ಕಾಯ್ದೆ ಅಪಮೌಲ್ಯ ತಡೆಗಟ್ಟುವ ನಿಯಮವಳಿ 1977 ರ ಪ್ರಕಾರ ಎಲ್ಲಾ ಮಾಹಿತಿಯನ್ನು ನೀಡಲು ಸೂಚಿಸಿದೆ.

ಅಧ್ಯಕ್ಷರು, ಕೇಂದ್ರ ಮೌಲ್ಯ ಮಾಪನ ಸಮಿತಿ, ಬೆಂಗಳೂರು ಇವರ ಆದೇಶದ ಮೇರೆಗೆ,

ಬಿ.ಎಸ್.ಶ್ರೀಧರ್
ಸದಸ್ಯ ಕಾರ್ಯದರ್ಶಿ.
ಕೇಂದ್ರ ಮೌಲ್ಯ ಮಾಪನ ಸಮಿತಿ, ಬೆಂಗಳೂರು.

GOVT. OF KARNATAKA ★ NOTARY ★
Y.R. CHANDRASEKHAR B.Com.,LL.B., Bengaluru City LAW 175 LCL 2016

ಕ್ರಸಂ	ಹೋಬಳಿ/ ಗ್ರಾಮ/ ವಾರ್ಡ್/ ರಸ್ತೆ /ಪ್ರದೇಶದ ಹೆಸರು	Hobli/Village/Area	ಸ್ಥಳೀಯ/ಸಕ್ಷಮ ಪ್ರಾಧಿಕಾರದ ವಸತಿ ನಿವೇಶನಗಳು.	ಸಕ್ಷಮ ಪ್ರಾಧಿಕಾರ ವಿಲ್ಲಾ/ರೋ ಹೌಸ್‌ಗಳು ನಿವೇಶನ ದರ	ಸ್ಥಳೀಯ/ಸಕ್ಷಮ ಪ್ರಾಧಿಕಾರದ ವಸತಿ ನಿವೇಶನದಲ್ಲಿ ನಿರ್ಮಿಸಿರುವ ಅಪಾರ್ಟ್‌ಮೆಂಟ್/ ವಿಲ್ಲಾಮೆಂಟ್ ಮತ್ತು ಫ್ಲಾಟ್‌ಗಳ ಮೌಲ್ಯ	ಕೃಷಿ ಜಮೀನು
			ಪ್ರತಿ ಚದರ ಮೀಟರ್‌ಗೆ ರೂ.ಗಳಲ್ಲಿ	ಪ್ರತಿ ಚದರ ಮೀಟರ್‌ಗೆ ರೂ.ಗಳಲ್ಲಿ	ಪ್ರತಿ ಚದರ ಮೀಟರ್ ಸೂಪರ್ ಬಿಲ್ಟ್ ಏರಿಯಾಗೆ ರೂ.ಗಳಲ್ಲಿ	ಪ್ರತಿ ಎಕರೆಗೆ ರೂ. ಲಕ್ಷಗಳಲ್ಲಿ
1	2	3	4	5	6	7
401	ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುವ ಸರ್ವೆ ನಂಬರ್‌ಗಳು 1, 2, 3, 4, 5, 6, 7, 8, 23, 58, 57, 59, 60, 61, 115.	State Highway adjacent Sy No. 1, 2, 3, 4, 5, 6, 7, 8, 23, 58, 57, 59, 60, 61, 115.	20000			286
402	ಯಡಿಯೂರಪ್ಪನಗರ ಹಕ್ಕು ಪತ್ರ ಬಡಾವಣೆ	Yediyurappa Nagara Hakkupatra Layout	10000			
403	ಸಿಂಗನಾಯಕನಹಳ್ಳಿ ಅಮಾನಿಕೆರೆ ಗ್ರಾಮ	**Singanayakanahalli amanikere Village**	10000			132
404	ಹಾರೋಹಳ್ಳಿ ಗ್ರಾಮ	**Harohalli Village**	22000			212
405	ಅಲ್ಟಿಮೇಟ್ ಸಿವಿಕ್ ಬಿಲ್ಡ್‌ಟೆಕ್ ಸಿಗ್ನೇಚರ್ ಅಪಾರ್ಟ್‌ಮೆಂಟ್ ಸರ್ವೆ ನಂ. 98 98/2 99 99/2	Ultimate civic buildtech signature apts Sy No. 98 98/2 99, 99/2			34000	
406	ಶೋಭ ಅಲ್ತೇಹಸರ್ವೆ ನಂ. 45/1 45/2 55/2	Shobha Althea Sy No. 45/1 45/2 55/2			47600	
407	ಶ್ರೀರಾಮ್ ಪ್ರಾಪರ್ಟೀಸ್ ಸಹಾನಾ ಸರ್ವೆ ನಂ. 78/1 ರಿಂದ 5 & 76	Shriram Properties Sahaana Sy No. 78/1 to 5 & 76			32000	
408	ಶ್ರೀರಾಮ್ ಪ್ರಾಪರ್ಟೀಸ್ ಸುಹಾನಾ ಸರ್ವೆ ನಂ. 70/1 70/2 75/1 ರಿಂ 3 77/1 95/4 75/6 7 9 10	Shriram Properties Suhaana Sy No. 70/1 70/2 75/1 to 75/3 77/1 95/4 75/6 7 9 10			32000	
409	ಹೊಯ್ಸಳ ಹ್ಯಾಬಿಟೇಟ್ ಸರ್ವೆ ನಂ. 53/3 53/5 46/5 46/6	Hoysala Habitate Sy No. 53/3 53/5 46/5 46/6			32000	
410	ಕೆ.ಇ.ಬಿ. ಬಡಾವಣೆ	K.E.B.Layout	23800			
411	ಇಸ್ರೋ ಬಡಾವಣೆ	Isro Layout	23800			
412	ಗರುಡಾ ನಗರ.	Garuda Nagara	23800			
413	ಪೆರಿಫರಲ್ ರಸ್ತೆಗೆ ಹೊಂದಿಕೊಂಡಿರುವ ಸರ್ವೆ ನಂಬರ್‌ಗಳು 16, 17, 18, 19, 29, 28, 27, 23, 20, 22, 24, 21, 40, 37, 38, 39, 59, 63, 60, 62, 61, 67, 65, 68.	Peripheral road adjacent Sy Nos. 16, 17, 18, 19, 29, 28, 27, 23, 20, 22, 24, 21, 40, 37, 38, 39, 59, 63, 60, 62, 61, 67, 65, 68.				
414	ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುವ ಸರ್ವೆ ನಂಬರ್‌ಗಳು 30. 31, 32, 33, 25, 26, 24, 41, 56, 55, 58, 57, 53, 52, 54, 73, 74, 75, 77, 78, 79, 80, 81, 49 .	State Highway adjacent Sy nos. 30. 31, 32, 33, 25, 26, 24, 41, 56, 55, 58, 57, 53, 52, 54, 73, 74, 75, 77, 78, 79, 80, 81, 49 .				358

NOTARY ★ GOVT. OF KARNATAKA ★ Y.R. CHANDRASEKAR B.Com., LL.B., Bangaluru City LAW 175 LCL 2016

ಕ್ರ ಸಂ	ಹೋಬಳಿ/ಗ್ರಾಮ/ವಾರ್ಡ್/ರಸ್ತೆ ಪ್ರದೇಶದ ಹೆಸರು	Hobli/Village/Area	ಸ್ಥಳೀಯ/ಸಕ್ಷಮ ಪ್ರಾಧಿಕಾರದ ವಸತಿ ನಿವೇಶನಗಳು.	ಸಕ್ಷಮ ಪ್ರಾಧಿಕಾರ ವಿಲ್ಲಾ/ರೋ ಹೌಸ್‌ಗಳ ನಿವೇಶನ ದರ	ಸ್ಥಳೀಯ/ಸಕ್ಷಮ ಪ್ರಾಧಿಕಾರದ ವಸತಿ ನಿವೇಶನದಲ್ಲಿ ನಿರ್ಮಿಸುವ ಅಪಾರ್ಟ್‌ಮೆಂಟ್ ಮತ್ತು ಫ್ಲಾಟ್‌ಗಳ ಮೌಲ್ಯ	ಕೃಷಿ ಜಮೀನು
			ಪ್ರತಿ ಚದರ ಮೀಟರ್‌ಗೆ ರೂ.ಗಳಲ್ಲಿ	ಪ್ರತಿ ಚದರ ಮೀಟರ್‌ಗೆ ರೂ.ಗಳಲ್ಲಿ	ಪ್ರತಿ ಚದರ ಮೀಟರ್‌ಗೆ ರೂ.ಗಳಲ್ಲಿ	ರೂ. ಲಕ್ಷಗಳಲ್ಲಿ ಪ್ರತಿ ಎಕರೆಗೆ
1	2	3	4	5	6	7
97	ಶ್ರೀ ಸಾಯಿ ಕಲ್ಯಾಣಿ ಕ್ಯೂಬೆಕ್ಸ್ ಅಪಾರ್ಟ್‌ಮೆಂಟ್	Shri Sai Kalyani Qubex Apartment			40000	
98	ಬಿಎಸ್.ಆರ್. ಅಪಾರ್ಟ್‌ಮೆಂಟ್	B.S.R. Apartment Apartment			40000	
99	ಶ್ರೀ ಸಾಯಿ ಕಲ್ಯಾಣಿ ವಿನ್ಸ್ ಅಪಾರ್ಟ್‌ಮೆಂಟ್	Shri Sai Kalyani WINST Apartment			43500	
100	ಶ್ರೀನಿಧಿ ಸಂಜನಾ ಅಪಾರ್ಟ್‌ಮೆಂಟ್	Srinidhi Sanjana Apartment			38100	
101	ಪರಿಪೂರ್ಣ ರೆಸಿಡೆನ್ಸಿ ಅಪಾರ್ಟ್‌ಮೆಂಟ್	Paripoorna Residency Apartment			38100	
102	ಶ್ರೀ ಸಾಯಿ ಕಲ್ಯಾಣಿ ಪರ್ಡ್ಸ್ ಅಪಾರ್ಟ್‌ಮೆಂಟ್	Shri Sai Kalyani PARDUS Apartment			38100	
103	ಅಕ್ಷಯ ಅಪೂರ್ವ ಅಪಾರ್ಟ್‌ಮೆಂಟ್	Akshaya Apoorva Apartment			38100	
104	ವೈಭವ್ ರೆಸ್ಸಿಡೆನ್ಸಿ ಅಪಾರ್ಟ್‌ಮೆಂಟ್	Vaibhav Residency Apartment			38100	
105	ಕೆ.ಬಿ.ಆರ್. ಹೋಮ್ಸ್ ಅಪಾರ್ಟ್‌ಮೆಂಟ್	KBR Homes Apartment			38100	
106	ಶ್ರೀ ಸಾಯಿ ಅಪಾರ್ಟ್‌ಮೆಂಟ್	Sri Sai Apartment			38100	
107	ಎಸ್ ಎಲ್ ವಿ ಹೋಮ್ಸ್ ಅಪಾರ್ಟ್‌ಮೆಂಟ್	SLV Homes Apartment			38100	
108	ಹೆಚ್ ಆರ್ ಸ್ಪ್ಲೆನ್ ಡಿಡೊ ಅಪಾರ್ಟ್‌ಮೆಂಟ್	H.R. Splendidio Apartment			38100	
109	ಎಲ್ ಎ ತುಲಿಪ್ ಅಪಾರ್ಟ್‌ಮೆಂಟ್	L.A. Tulip Apartment			38100	
110	ಲಿಲ್ಲಿ ಪಾಂಡ್ ಅಪಾರ್ಟ್‌ಮೆಂಟ್	Lily Pond Sky Apartment			38100	
111	ಪ್ರೆಸ್ಟೀಜ್ ಮಿಸ್ಟಿ ವಾಟರ್ ಅಪಾರ್ಟ್‌ಮೆಂಟ್	Prestige Misty Waters Apartment			61000	
112	ಕೆರ್ಪ ಇಮೇಜಿಂಗ್ ಅಪಾರ್ಟ್‌ಮೆಂಟ್	Cepha Imaging Apartment			38100	
		ಕೊಡಿಗೇಹಳ್ಳಿ / Kodigehalli				
113	ಕೊಡಿಗೇಹಳ್ಳಿ	Kodigehalli	35000			520
114	ಕೆನರಾ ಬ್ಯಾಂಕ್ ಬಡಾವಣೆ	Canara Bank Layout	37500			
115	ಸಂಜೀವಿನಿನಗರ	Sanjeevinagara	30000			
116	ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್ ಬಡಾವಣೆ (ಟಾಟಾ ನಗರ)	Indian Institute Of science layout (Tatanagara)	42000			
117	ಟಾಟಾ ನಗರ 60 ಅಡಿ ರಸ್ತೆ	TATA Nagar 60 Ft Road	43000			
118	ಟೆಲಿಕಾಂ ಬಡಾವಣೆ	Telecom Layout	35000			
119	ರವಿಶಂಕರ್ ರೆಸಿಡೆನ್ಸಿ	Ravishankar Residency	36500			
120	ಅಮ್ಕೊ ಬಡಾವಣೆ	Amco Layout	35000			
121	ಧನಲಕ್ಷ್ಮಿ ಲೇಔಟ್	Dhanalakshmi Layout	35000			

ನಕಲು ಅರ್ಜಿ ಸಲ್ಲಿಸಿದವರು ....
ನಕಲು ಅರ್ಜಿ ಸಲ್ಲಿಸಿದ ದಿನಾಂಕ 3.11.2020
ನಕಲು ತಯಾರಾದ ದಿನಾಂಕ 3.11.2020
ನಕಲು ತಯಾರಿಸಿದವರು ....
ನಕಲು ಹೋಲಿಸಿದವರು ....
ನಕಲು ವಿಲೇವಾರಿ ಮಾಡಿದ ದಿನಾಂಕ 3.11.2020

"ಈ ಛಾಯಾಪ್ರತಿಯಲ್ಲಿ ಯಾವುದೇ ತಪ್ಪುಗಳಿರುವುದಿಲ್ಲ"

"TRUE COPY"

ಹಿರಿಯ-ಉಪನೋಂದಣಾಧಿಕಾರಿಗಳು
ಗಾಂಧಿನಗರ (ಕಾಚರಕನಹಳ್ಳಿ), ಬೆಂಗಳೂರು

ಉಪ ನೋಂದಣಾಧಿಕಾರಿಗಳ ಮುದ್ರೆ
The Seal of the Sub-Registrar of Gandhinagara (Kacharakanahalli)

TRUE COPY

Y.R. CHANDRASEKAR, B.Com., LL.B.
ADVOCATE & NOTARY
3, 2nd Main, 10th Cross,
Kanakanagar, R.T. Nagar Post,
BANGALORE - 560 032.

NOTARY ★ GOVT. OF KARNATAKA ★
Y.R. CHANDRASEKAR
B.Com., LL.B.
Bengaluru City
LAW-175
LCL 2016

ಕ್ರಸಂ	ಹೋಬಳಿ/ ಗ್ರಾಮ/ ವಾರ್ಡ್/ ರಸ್ತೆ /ಪ್ರದೇಶದ ಹೆಸರು	Hobli/Village/Area	ಸ್ಥಳೀಯ/ಸಕ್ಷಮ ಪ್ರಾಧಿಕಾರದ ವಸತಿ ನಿವೇಶನಗಳು.	ಸಕ್ಷಮ ಪ್ರಾಧಿಕಾರ ವಿಲ್ಲಾ/ರೋ ಹೌಸ್‌ಗಳು ನಿವೇಶನ ದರ	ಸ್ಥಳೀಯ/ಸಕ್ಷಮ ಪ್ರಾಧಿಕಾರದ ವಸತಿ ನಿವೇಶನದಲ್ಲಿ ನಿರ್ಮಿಸಿರುವ ಅಪಾರ್ಟ್‌ಮೆಂಟ್/ ವಿಲ್ಲಾಮೆಂಟ್ ಮತ್ತು ಫ್ಲಾಟ್‌ಗಳ ಮೌಲ್ಯ	ಕೃಷಿ ಜಮೀನು
			ಪ್ರತಿ ಚದರ ಮೀಟರ್‌ಗೆ ರೂ.ಗಳಲ್ಲಿ	ಪ್ರತಿ ಚದರ ಮೀಟರ್‌ಗೆ ರೂ.ಗಳಲ್ಲಿ	ಪ್ರತಿ ಚದರ ಮೀಟರ್ ಸೂಪರ್ ಬಿಲ್ಟಪ್ ಏರಿಯಾಗೆ ರೂ.ಗಳಲ್ಲಿ	ಪ್ರತಿ ಎಕರೆಗೆ ರೂ. ಲಕ್ಷಗಳಲ್ಲಿ
1	2	3	4	5	6	7
401	ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುವ ಸರ್ವೆ ನಂಬರ್‌ಗಳು 1, 2, 3, 4, 5, 6, 7, 8, 23, 58, 57, 59, 60, 61, 115.	State Highway adjacent Sy No. 1, 2, 3, 4, 5, 6, 7, 8, 23, 58, 57, 59, 60, 61, 115.	20000			286
402	ಯಡೀಯೂರಪ್ಪನಗರ ಹಕ್ಕು ಪತ್ರ ಬಡಾವಣೆ	Yediyurappa Nagara Hakkupatra Layout	10000			132
403	ಸಿಂಗನಾಯಕನಹಳ್ಳಿ ಅಮಾನಿಕೆರೆ ಗ್ರಾಮ	**Singanayakanahalli amanikere Village**	10000			212
404	ಹಾರೋಹಳ್ಳಿ ಗ್ರಾಮ	**Harohalli Village**	22000			
405	ಅಲ್ಟಿಮೇಟ್ ಸಿವಿಕ್ ಬಿಲ್ಡ್‌ಟೆಕ್ ಸಿಗ್ನೇಚರ್ ಅಪಾರ್ಟ್‌ಮೆಂಟ್ ಸರ್ವೆ ನಂ. 98 98/2 99 99/2	Ultimate civic buildtech signature apts Sy No. 98 98/2 99, 99/2			34000	
406	ಶೋಭ ಅಲ್ತೇಹಸರ್ವೆ ನಂ. 45/1 45/2 55/2	Shobha Althea Sy No. 45/1 45/2 55/2			47600	
407	ಶ್ರೀರಾಮ್ ಪ್ರಾಪರ್ಟೀಸ್ ಸಹಾನಾ ಸರ್ವೆ ನಂ. 78/1 ರಿಂದ 5 & 76	Shriram Properties Sahaana Sy No. 78/1 to 5 & 76			32000	
408	ಶ್ರೀರಾಮ್ ಪ್ರಾಪರ್ಟೀಸ್ ಸುಹಾನಾ ಸರ್ವೆ ನಂ. 70/1 70/2 75/1 ರಿಂ 3 77/1 95/4 75/6 7 9 10	Shriram Properties Suhaana Sy No. 70/1 70/2 75/1 to 75/3 77/1 95/4 75/6 7 9 10			32000	
409	ಹೊಯ್ಸಳ ಹ್ಯಾಬಿಟೇಟ್ ಸರ್ವೆ ನಂ. 53/3 53/5 46/5 46/6	Hoysala Habitate Sy No. 53/3 53/5 46/5 46/6			[illegible]	
410	ಕೆ.ಇ.ಬಿ. ಬಡಾವಣೆ	K.E.B.Layout	23800			
411	ಇಸ್ರೋ ಬಡಾವಣೆ	Isro Layout	23800			
412	ಗರುಡಾ ನಗರ	Garuda Nagara	23800			
413	ಪೆರಿಫೆರಲ್ ರಸ್ತೆಗೆ ಹೊಂದಿಕೊಂಡಿರುವ ಸರ್ವೆ ನಂಬರ್‌ಗಳು 16, 17, 18, 19, 29, 28, 27, 23, 20, 22, 24, 21, 40, 37, 38, 39, 59, 63, 60, 62, 61, 67, 65, 68.	Peripheral road adjacent Sy Nos. 16, 17, 18, 19, 29, 28, 27, 23, 20, 22, 24, 21, 40, 37, 38, 39, 59, 63, 60, 62, 61, 67, 65, 68.				3[illegible]
414	ರಾಜ್ಯ ಹೆದ್ದಾರಿಗೆ ಹೊಂದಿಕೊಂಡಿರುವ ಸರ್ವೆ ನಂಬರ್‌ಗಳು 30. 31, 32. 33, 25, 26, 24, 41, 56, 55, 58, 57, 53. 52, 54, 73, 74, 75, 77, 78, 79, 80, 81, 49 .	State Highway adjacent Sy nos. 30. 31, 32, 33, 25, 26, 24, 41, 56, 55, 58, 57, 53, 52, 54, 73, 74, 75, 77, 78, 79, 80, 81, 49 .				358

NOTARY Y.R. CHANDRASEKAR B.Com., LL.B. Bengaluru City LAW 175 LCL 2016 GOVT. OF KARNATAKA